SEPTEMBER 08, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

<><><>

- ‘ಖಗ್ರಾಸ ಚಂದ್ರ ಗ್ರಹಣ’, ಇಂದು ಬೆಳಗಿನ ಜಾವ, 1 ಗಂಟೆ 26 ನಿಮಿಷದ ವರೆಗೆ, ಗೋಚರ.
- ‘ಸಶಕ್ತ ಜೀವನಕ್ಕಾಗಿ, ಸರಿಯಾದ ಆಹಾರ’ ಧ್ಯೇಯ; ರಾಷ್ಟ್ರೀಯ ಪೌಷ್ಟಿಕಾಂಶ ಸಪ್ತಾಹ, ಸಂಪನ್ನ.
- ಸರಕು ಮತ್ತು ಸೇವಾ ತೆರಿಗೆ ಪರಿಷ್ಕರಣೆ; ಕೃಷಿ, ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಹಲವು ಲಾಭ – ಆರ್ಥಿಕ ತಜ್ಞರ ಅಭಿಮತ.
- ಇಂದು, ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಪೂರ್ಣ ಚಂದ್ರ ಗ್ರಹಣ, ರಕ್ತ ವರ್ಣದಲ್ಲಿ ಗೋಚರಿಸಿದ ಹಿನ್ನೆಲೆ, ‘ರಕ್ತ ಚಂದ್ರ ಗ್ರಹಣ’ ಅಥವಾ ‘ಖಗ್ರಾಸ ಚಂದ್ರ ಗ್ರಹಣ’, ನಿನ್ನೆ ರಾತ್ರಿ 9 ಗಂಟೆ 56 ನಿಮಿಷದಿಂದ ಆರಂಭವಾಗಿ, ಇಂದು ಬೆಳಗಿನ ಜಾವ 1 ಗಂಟೆ 26 ನಿಮಿಷದ ವರೆಗೆ, ಗೋಚರಿಸಿತು. ಈ ವರ್ಷದ ಕೊನೆಯ ಚಂದ್ರ ಗ್ರಹಣದ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹುಬ್ಬಳ್ಳಿ ತಾಲೂಕು, ಕುಸುಗಲ್ಲ ಸರ್ಕಾರಿ ಪ್ರೌಢ ಶಾಲೆಯ, ವಿಜ್ಞಾನ ಶಿಕ್ಷಕ ಸಂಜೀವಕುಮಾರ ಭೂಶೆಟ್ಟಿ.

<><><>

ಶಿಕ್ಷಕ ಸಂಜೀವಕುಮಾರ ಭೂಶೆಟ್ಟಿ ಧ್ವನಿ 40 ಸೆಕೆಂದುಗಳು

<><><>

'ಸಶಕ್ತ ಜೀವನಕ್ಕಾಗಿ, ಸರಿಯಾದ ಆಹಾರ' ಧ್ಯೇಯದೊಂದಿಗೆ, ರಾಷ್ಟ್ರೀಯ ಪೌಷ್ಟಿಕಾಂಶ ಸಪ್ತಾಹ, ಭಾನುವಾರ ಸಂಪನ್ನಗೊಂಡಿತು. ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಸಾರಥ್ಯದಲ್ಲಿ,ಅಪೌಷ್ಟಿಕತೆಯನ್ನು ಎದುರಿಸಲು, ಪೌಷ್ಟಿಕಾಂಶ ಸಪ್ತಾಹ ರಾಜ್ಯಾದ್ಯಂತ, ಆಚರಿಸಲಾಯಿತು.

<><><>

5 ಲಕ್ಷ 75 ಸಾವಿರದ 551 ಕಾರ್ಯಕ್ರಮಗಳನ್ನು, ರಾಜ್ಯದ 31 ಜಿಲ್ಲೆಗಳಲ್ಲಿ ಆಯೋಜಿಸಿ, ಮಹಿಳೆಯರು ಹಾಗೂ ಮಕ್ಕಳಲ್ಲಿ, ಉತ್ತಮ, ಆರೋಗ್ಯಯುತ ಜೀವನಕ್ಕಾಗಿ, ಪೌಷ್ಟಿಕಾಂಶಯುಕ್ತ ಆಹಾರ ಪದ್ಧತಿಯ, ಮಹತ್ವದ ಬಗ್ಗೆ ಜಾಗೃತಿ  ಮೂಡಿಸಲಾಯಿತು.

<><><>

'ಮಗುವಿನ ಆರೋಗ್ಯ ಹಾಗೂ ಪೌಷ್ಟಿಕತೆ' ಧ್ಯೇಯದೊಂದಿಗೆ, 8ನೇ ರಾಷ್ಟ್ರೀಯ ಪೋಷಣ್ ಮಾಸಾಚರಣೆ, ಈ ತಿಂಗಳ 12 ರಿಂದ, ಅಕ್ಟೋಬರ್ 11ರ ವರೆಗೆ, ದೇಶಾದ್ಯಂತ ನಡೆಯಲಿದೆ. ಈ ಕುರಿತು ಒಂದು ವರದಿ..

*ಕಿತ್ತೂರು ಕರ್ನಾಟಕದ 7 ಹಾಗೂ ಕಲ್ಯಾಣ ಕರ್ನಾಟಕದ 6, ಒಟ್ಟು 13 ಜಿಲ್ಲೆಗಳಲ್ಲಿ, ಹದಿ ಹರೆಯದ ಹೆಣ್ಣುಮಕ್ಕಳು, ಯುವತಿಯರು, ಗರ್ಭಿಣಿಯರು, ಬಾಣಂತಿಯರು ಹಾಗೂ ಶೈಶವಾವಸ್ಥೆ ಶಿಶುಗಳಲ್ಲಿ, ಅಪೌಷ್ಟಿಕತೆ ಮತ್ತು ರಕ್ತಹೀನತೆ ಸಮಸ್ಯೆ, ಕಳವಳ ಹುಟ್ಟಿಸುವಂತಿದ್ದು, ಕಾಳಜಿ ಪೂರ್ವಕ ಆರೈಕೆಯನ್ನು, ಆದ್ಯತೆಯ ಮೇಲೆ ಬಯಸುತ್ತದೆ. ಪೌಷ್ಟಿಕಾಂಶ ತಜ್ಞರು, ಆಹಾರ ಶಾಸ್ತ್ರಜ್ಞರ ಪ್ರಕಾರ, ಸಮತೋಲಿತ ಮತ್ತು ಪೌಷ್ಟಿಕಾಂಶಯುಕ್ತ ಆಹಾರ ಸೇವಿಸದೇ, ನಿತ್ಯದ ಆಹಾರದಲ್ಲಿ, ಹಣ್ಣು, ಕಾಯಿಪಲ್ಯ ಮತ್ತು ಮೊಳಕೆ ಕಾಳುಗಳು, ಸಿರಿಧಾನ್ಯಗಳ ಮೌಲ್ಯವರ್ಧಿತ ಖಾದ್ಯ ಬಳಕೆಯನ್ನು ವರ್ಜಿಸಿರುವುದೇ, ಅಪೌಷ್ಟಿಕತೆ ಮತ್ತು ರಕ್ತಹೀನತೆಗೆ ಬಹು ಮುಖ್ಯ ಕಾರಣವಾಗಿದೆ. ಅಪೌಷ್ಟಿಕತೆ ಮತ್ತು ರಕ್ತಹೀನತೆ ಸಂಬಂಧಿ, ಅನಾರೋಗ್ಯ ಸಮಸ್ಯೆ ನಿವಾರಿಸಲು, ಮಾತ್ರೆಗಳ ಸೇವನೆ ಪರಿಹಾರವಲ್ಲ. ಸಮತೋಲಿತ ಆಹಾರ ಸೇವನೆಯೊಂದೇ ಹಾದಿ ಎನ್ನುತ್ತಾರೆ.. ಧಾರವಾಡ ಕೃಷಿ ವಿಶ್ವವಿದ್ಯಾಲಯದ, ಆಹಾರ ವಿಜ್ಞಾನ ವಿಭಾಗದ ಪ್ರಾಧ್ಯಾಪಕಿ ನಿರ್ಮಲಾ ಏಣಗಿ. ಪ್ರದೇಶ ಸಮಾಚಾರಕ್ಕಾಗಿ ಅವರು, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.*

<><><>

ವಿವೇಕ (43) + ಡಾ. ನಿರ್ಮಲಾ ಏಣಗಿ ಧ್ವನಿ (60) ಸೆಕೆಂದುಗಳು

<><><>

ಹುಬ್ಬಳ್ಳಿಯ ಎಫ್.ಎಚ್.ಜಕ್ಕಪ್ಪನವರ, ಚಿಕ್ಕಮಗಳೂರಿನ ಆರತಿ ಕೃ ್ಣ, ಮೈಸೂರಿನ ಕೆ.ಶಿವಕುಮಾರ ಹಾಗೂ ಬೆಂಗಳೂರಿನ ರಮೇಶ ಬಾಬು ಅವರನ್ನು, ವಿಧಾನ ಪರಿಷತ್ ನಾಮ ನಿರ್ದೇಶಿತ ಸದಸ್ಯರಾಗಿ ನೇಮಿಸಲು, ರಾಜ್ಯ ಸರ್ಕಾರ ಸಲ್ಲಿಸಿದ್ದ ಪ್ರಸ್ತಾವಕ್ಕೆ, ರಾಜ್ಯಪಾಲ ಥಾವರಚಂದ್ ಗೆಹಲೋಟ್ ಅಂಕಿತ ಹಾಕಿದ್ದಾರೆ. ಈ ಕುರಿತು ರಾಜ್ಯ ಪರಿಪತ್ರ ಪ್ರಕಟಿಸಲಾಗಿದೆ.

<><><>

ಈಗ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(43 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.

<><><>

ಸರಕು ಮತ್ತು ಸೇವಾ ತೆರಿಗೆ – ಜಿ.ಎಸ್.ಟಿ., ಕೇಂದ್ರ ಮಂಡಳಿಯಿಂದ ಎರಡನೇ ಆವೃತ್ತಿಯ ಪರಿಷ್ಕರಣೆ, ಆರೋಗ್ಯ, ಕೃಷಿ, ಶಿಕ್ಷಣ ಕ್ಷೇತ್ರಗಳಿಗೆ ಹಲವು ಅನುಕೂಲ ಕಲ್ಪಿಸಲಿದೆ ಎಂದು, ಆರ್ಥಿಕ ತಜ್ಞರು, ಹಲವು ಸಾಮಾಜಿಕ ಮಾಧ್ಯಮಗಳಲ್ಲಿ, ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

<><><>

ಆರೋಗ್ಯ ಮತ್ತು ಜೀವ ವಿಮೆ ಮೇಲಿನ, ಜಿ.ಎಸ್.ಟಿ. ತೆರಿಗೆ ವಿನಾಯಿತಿಯಿಂದ, ಪ್ರತಿಯೊಬ್ಬರಿಗೆ, ವಾರ್ಷಿಕ 28 ಸಾವಿರ ರೂಪಾಯಿ ಉಳಿತಾಯವಾಗಲಿದೆ. ಪ್ರತಿಯೊಬ್ಬರು ವಿಮಾ ಸೌಲಭ್ಯ ಪಡೆದುಕೊಳ್ಳಲು ಸಹಕಾರಿಯಾಗಲಿದೆ ಎನ್ನುತ್ತಾರೆ, ವಿಮೆ ಕ್ಷೇತ್ರದ ಪರಿಣಿತರು.

<><><>

ಹೆಸರಾಂತ ಲೆಕ್ಕ ಪರಿಶೋಧಕ ಹಾಗೂ ವೃತ್ತಿಪರ ಆರ್ಥಿಕ ಸಲಹೆಗಾರ, ಬೆಂಗಳೂರಿನ ಪ್ರಮೋದ ಶ್ರೀಕಾಂತ ದೈತೋಟ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಸಿ.ಎ. ಪ್ರಮೋದ ದೈತೋಟ ಧ್ವನಿ (65) ಸೆಕೆಂದುಗಳು

<><><>

ಬ್ರಹ್ಮರ್ಷಿ ನಾರಾಯಣ ಗುರುಗಳ ಚಿಂತನೆ ಮತ್ತು ಹೋರಾಟದ ಉದ್ದೇಶ, ಸಮಾಜದಲ್ಲಿರುವ ಜಾತಿ ವ್ಯವಸ್ಥೆ, ಮೂಢನಂಬಿಕೆ, ಅಂಧ ಶ್ರದ್ಧೆ ಕೊನೆಗಾಣಿಸಿ, 'ವಿದ್ಯೆಯಿಂದ ಸ್ವತಂತ್ರರಾಗಿರಿ' ಎಂದು, ಪ್ರತಿಪಾದಿಸಿದ್ದಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ, ಶ್ರೀ ನಾರಾಯಣ ಗುರು ಜಯಂತ್ಯುತ್ಸವದಲ್ಲಿ ಪಾಲ್ಗೊಂಡು ಮಾತನಾಡಿದರು. ರಾಜ್ಯ ಸರ್ಕಾರ, 31 ಜಯಂತಿಗಳನ್ನು ಆಚರಿಸುತ್ತದೆ. 2016 ರಲ್ಲಿ ನಾರಾಯಣ ಗುರುಗಳ ಜಯಂತಿ ಆಚರಣೆ ಪ್ರಾರಂಭಿಸಿದ್ದು, ತಮ್ಮ ಸರ್ಕಾರದ ಅವಧಿಯಲ್ಲಿ ಎಂದರು.

<><><>

'ಡಿಜಿಟಲ್ ಯುಗದಲ್ಲಿ, ಸಾಕ್ಷರತೆಯನ್ನು ಉತ್ತೇಜಿಸುವುದು' ಎಂಬ ಧ್ಯೇಯದೊಂದಿಗೆ, ಇಂದು ಅಂತಾರಾಷ್ಟ್ರೀಯ ಸಾಕ್ಷರತಾ ದಿನವನ್ನು ಆಚರಿಸಲಾಗುತ್ತಿದೆ. ಸಾಕ್ಷರತೆ ಮತ್ತು ಡಿಜಿಟಲ್ ಕೌಶಲಗಳಿಸದಿದ್ದರೆ, ಅಂತರ ಹೆಚ್ಚಿ, ಈ ಕಂದರದಿಂದಾಗಿ ವ್ಯಕ್ತಿ, ಸಮುದಾಯ ಹಾಗೂ ಸಮಾಜಗಳು, ಇನ್ನಷ್ಟು ಹೊರಗುಳಿಯುವ ಆತಂಕ ಸೃಷ್ಟಿಯಾಗದಂತೆ, ಜನಜಾಗೃತಿ ಮೂಡಿಸಲಾಗುತ್ತಿದೆ.

ಯುನೆಸ್ಕೊ 1966ರ ಅಕ್ಟೋಬರ್ 26ರಂದು, ಸಾಮಾನ್ಯ ಸಮ್ಮೇಳನದ 14ನೇ ಅಧಿವೇಶನದಲ್ಲಿ, ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆಯನ್ನು ಅಧಿಕೃತವಾಗಿ ಘೋಷಿಸಿತು. 1967ರಲ್ಲಿ ಪ್ರಥಮ ಬಾರಿಗೆ ಆಚರಿಸಲಾಯಿತು.

<><><>

'ಸ್ವಚ್ಛತಾ ಹೀ ಸೇವಾ', ಮಾಸಿಕ ಜನಾಂದೋಲನ, ಅಕ್ಟೋಬರ್ 2 ಮಹಾತ್ಮ ಗಾಂಧಿ ಜಯಂತಿ ವರೆಗೆ, ರಾಜ್ಯಾದ್ಯಂತ ಆಯೋಜಿತವಾಗಿದೆ. ಕೋಲಾರ ಜಿಲ್ಲಾಧಿಕಾರಿ ಎಂ.ಆರ್. ರವಿ ಸೈಕಲ್ ಬಳಸಿ, ನಗರ ಸರ್ವೇಕ್ಷಣೆ ಆರಂಭಿಸಿದರು. ಅಕ್ಟೋಬರ್ 2ರ ವರೆಗೆ, ಪ್ರತಿ ಭಾನುವಾರ, ಕೋಲಾರ ನಗರದ 85 ವರ್ಷಗಳಷ್ಟು ಹಳೆಯದಾದ, ಸರ್ವಜ್ಞ ಪಾರ್ಕ್ ಸೇರಿದಂತೆ, ಎಲ್ಲ 19 ಉದ್ಯಾನವನಗಳನ್ನು, ಸಾರ್ವಜನಿಕರ ಸಹಭಾಗಿತ್ವದಲ್ಲಿ, ಸ್ವಚ್ಛಗೊಳಿಸಲು ನಿರ್ಧರಿಸಲಾಗಿದೆ ಎಂದರು. 15ನೇ ಹಣಕಾಸು ಯೋಜನೆಯಡಿ, 'ಅಮೃತ ನಗರೋತ್ಥಾನ' ಕಾರ್ಯಕ್ರಮದಡಿ, ಉದ್ಯಾನಗಳ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸುವುದಾಗಿ, ತಿಳಿಸಿದ್ದಾರೆ.

<><><>

'ರಾಷ್ಟ್ರಕ್ಕಾಗಿ ಮಧ್ಯಸ್ಥಿಕೆ' ಧ್ಯೇಯದೊಂದಿಗೆ, ಜುಲೈ 1 ರಿಂದ ಈ ತಿಂಗಳ 30ರ ವರೆಗೆ,90 ದಿನಗಳ, ವಿಚಾರಣಾ ಹಂತದ ಪ್ರಕರಣಗಳನ್ನು, ಕಕ್ಷಿದಾರರು ರಾಜೀ ಸಂಧಾನದ ಮೂಲಕ, ಬಗೆಹರಿಸಿಕೊಳ್ಳಲು, ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರಗಳು, ಅವಕಾಶ ಕಲ್ಪಿಸಿವೆ. ಈ ತಿಂಗಳ 13 ರಂದು, 3ನೇ ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿತವಾಗಿದೆ. ಹೆಚ್ಚಿನ ಮಾಹಿತಿಗೆ, ನಾಲ್ಸಾ ಕಾನೂನು ಉಚಿತ ಸಹಾಯವಾಣಿ, 1–5–1–0–0 ಗೆ ಕರೆ ಮಾಡಬಹುದು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 'ಖಗ್ರಾಸ ಚಂದ್ರ ಗ್ರಹಣ', ಇಂದು ಬೆಳಗಿನ ಜಾವ, 1 ಗಂಟೆ 26 ನಿಮಿಷದ ವರೆಗೆ, ಗೋಚರ.
- 'ಸಶಕ್ತ ಜೀವನಕ್ಕಾಗಿ, ಸರಿಯಾದ ಆಹಾರ' ಧ್ಯೇಯ; ರಾಷ್ಟ್ರೀಯ ಪೌಷ್ಟಿಕಾಂಶ ಸಪ್ತಾಹ, ಸಂಪನ್ನ.
- ಸರಕು ಮತ್ತು ಸೇವಾ ತೆರಿಗೆ ಪರಿಷ್ಕರಣೆ; ಕೃಷಿ, ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಹಲವು ಲಾಭ – ಆರ್ಥಿಕ ತಜ್ಞರ ಅಭಿಮತ.
- ಇಂದು, ಅಂತಾರಾಷ್ಟ್ರೀಯ ಸಾಕ್ಷರತಾ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>